## ಕಾವ್ಯಮಂಜರಿ

4

ಪವಿತ್ರಾತ್ಮಗಳಲ್ಲದ ನಮ್ಮಂಥವರು
ಅಮೃತವನು ಸೇವಿಸಲು ಆಗುವುದಿಲ್ಲ
ಬಾಯಾರಿದಾಗ
ನೀರು ಬೇಕೇ ಬೇಕು

ಈ ನೀರನಾದ ಬಲು ವಿಚಿತ್ರ
ಹಲವರ ದಾಹ ಹಿಂಗಿಸುತ್ತದೆ
ಕೆಲವರ ದಾಹ ಹೆಚ್ಚಿಸುತ್ತದೆ

ನೀರೇ ಬಾಯಾರಿ
ನಿನ್ನ ಗರ್ಭದಲಿ ಮೊಳೆತಾಗ
ಸುರೆಯ ಬೀಜವಾಗಿ

5

ಪವಿತ್ರ ಗಂಗಾ ಜಲವೂ
ಜ಼ಮಜ಼ಮ್ ನ ಸಿಹಿಜಲವೂ
ಉಪ್ಪು ನೀರಾಗಿ ಹರಿಯುತಿದೆ
ಈ ಹುಲುಮಾನವನ ದೇಹದಲಿ
ಇಷ್ಟೊಂದು ಉಪ್ಪಿನ ಚೀಲಗಳನು
ಸಾಲಾಗಿ ಒಟ್ಟಿದವರು ಯಾರೊ!

ಉಪ್ಪು ತಿಂದ ಮೇಲೆ
ನೀರು ಕುಡಿಯಲೇ ಬೇಕು
ಕುಂಬಳಕಾಯಿ ಕಳ್ಳ
ಹೆಗಲು ಮುಟ್ಟಿಕೊಳ್ಳಲೇ ಬೇಕು

ಇದು
ಉಪ್ಪಿನ ಮೂಟೆಗಳ ಹೆಗಲ ಮೇಲೆ ಹೊತ್ತು
ನೀರು ದಾಟುವ ಕತ್ತೆಯ ಕಥನ





6

ನೀರನು ಪಳಗಿಸಿದಿರಿ ನೀರಲಿ ಹಾಕಿ
ಲೋಟ ತಂಬಿಗೆ ಕೊಡಾಪಾನ
ಕೊನೆಗೆ ಡ್ಯಾಮಿನಲಿ ಸಾಕಿ

ಹುಷಾರ್!
ಜಾಸ್ತಿ ಗೋಳು ಹೊಯ್ದು ಕೊಳ್ಳಬೇಡಿ
ಬಾಗಿ ಬಳುಕಿ ಸೆಟೆದು ಕುಣಿದು ಮಣಿದು ದಣಿದು
ನೀರಿನ ಆತ್ಮ ಗೌರವಕ್ಕೇನಾದರೂ
ಧಕ್ಕೆ ಬಂದು ಅದರ ತಲೆಯೇನಾದರೂ ಕೆಟ್ಟರೆ
ಬೆಟ್ಟ ಗುಡ್ಡ ಊರು ಶಹರ ನೀನು ನಾನು
ಯಾರೆಂದರೆ ಯಾರಿಗೂ ಉಳಿಗಾಲವಿಲ್ಲ!

### KA 36 F 0586

ನಾನು ನನ್ನ ಬೆನ್ನನೇ
ನೋಡಿಲ್ಲ...
ಬೆನ್ನ ಹಿಂದೆ ಮಾತನಾಡುವವರನ್ನು
ಯಾಕೆ ನೋಡಲಿ?

(ಆಟೋ ಹಿಂದೆ ಬರೆದದ್ದು)